ಬಾಗಿಲು ಹಾಕಲೆಂದು ತಿರುಗಿದಾಗ ಆಕೆಯಾಗಲೇ ಗೇಟು ದಾಟಿ ತಲೆತಗ್ಗಿಸಿ ಸರಸರನೆ ಹೊರಟದ್ದು ಕಂಡಿತ್ತು. ಸಿಕ್ಕಿ ಹಾಕಿಕೊಂಡ ಭಯಕ್ಕೇ ಅವಸರದಲ್ಲಿ ಹೋದದ್ದು ಎಂದುಕೊಂಡು ಕೆಲಸದೆಡೆ ಗಮನ ಹರಿಸಿದ್ದಳು. ನಂತರದಲ್ಲಿ ಬೀಗರೊಡನೆ ಉಭಯಕುಶಲೋಪರಿ, ಊಟ–ತಿಂಡಿ, ಊರು ತಿರುಗಿಸುವ ಭರಾಟೆ ಬೀಳ್ಕೊಡುವಿಕೆಯ ಭರದಲ್ಲಿ ಹೆಂಗಸಿನ ವಿಷಯವೇ ಮರೆತುಹೋಗಿತ್ತು. ಬಿಡುವಾಗಿ ಕೂತು ಮೆಲುಕು ಹಾಕಿದಾಗ ಆ ಹೆಂಗಸಿನ ದೈನ್ಯತೆಯೇ ಮೊದಲು ನೆನಪಾದದ್ದು. ತಾನೆಂದಿಗೂ ಯಾರನ್ನೂ ಬರಿಗೈಯಲ್ಲಿ ಕಳಿಸಿದ್ದಿಲ್ಲ; ಸೌಜನ್ಯಕ್ಕಾದರೂ ಅವಳ ಅವಶ್ಯಕತೆ ಕೇಳಿ ಆಮೇಲೆ ನಯವಾಗಿಯೇ ಹೇಳಿ ಕಳಿಸಿದರಾಗಿತ್ತು. ಒರಟಾಗಿ ಆಕೆಯೊಡನೆ ವ್ಯವಹರಿಸಿದ್ದು ಸರಿಯೆನ್ನಿಸದಿದ್ದರೂ ಹೆಸರು ಹೇಳದೇ ಮೋಸ ಮಾಡಲೆತ್ನಿಸಿದ್ದಕ್ಕೆ ತಾನು ಮಾಡಿದ್ದೇ ಸರಿಯೆಂದು ತನ್ನಷ್ಟಕ್ಕೆ ಸಮರ್ಥಿಸಿಕೊಂಡಿದ್ದಳು.

ದಿನಗಳು ಉರುಳಿದ್ದವು, ಸುನಂದಕ್ಕನ ಮನೆಯಲ್ಲಿ ಸತ್ಯನಾರಾಯಣ ಪೂಜೆಗೆ ಆಮಂತ್ರಣವಿತ್ತು. ಸಪಾದವನ್ನು ಕೇಳಾದರೂ ಪಡೆಯಬೇಕಂತೆ, ಅಂಥಾದ್ದರಲ್ಲಿ ಆಮಂತ್ರಣ ದೊರೆತಾಗ ತಪ್ಪಿಸುವ ಮಾತೇ ಇಲ್ಲ; ಮೇಲಾಗಿ ಎಲ್ಲರನ್ನೂ ಭೇಟಿಯಾಗುವ ತವಕ. ಮೊದಲೇ ಅವಸರದ ದಿನಮಾನ. ನಗರದಲ್ಲಂತೂ ಯಾರೂ ಯಾರ ಮನೆಗೂ ಸುಖಾಸುಮ್ಮನೆ ಹೋಗುವಂತಿಲ್ಲ, ಹೋಗಲಾರರು ಕೂಡ. ಸಮಯದ ಅಭಾವವೋ, ಟ್ರಾಫಿಕ್ಕೋ ಒಟ್ಟಿನಲ್ಲಿ ಯಾವುದಾದರೊಂದು ಕಾರಣ ಸಕಾರಣವಾಗಿಬಿಡುತ್ತದೆ. ಅಂದುಕೊಂಡಾಗಲೆಲ್ಲಾ ಸಂಬಂಧಿಕರ ಮನೆಗಳಿಗೆ ಭೇಟಿ ಕೊಟ್ಟು ಹರಟುವ ಮುಕ್ತತೆ ಭೂತಕಾಲದ ಗರ್ಭ ಸೇರಿದ್ದಾಗಿದೆ. ಈಗೇನಿದ್ದರೂ ಇಂತಹ ಸಮಾರಂಭಗಳೇ ಒಬ್ಬರನ್ನೊಬ್ಬರು ಭೇಟಿಯಾಗುವ ಕೊಂಡಿಯಾಗಿ ಫೋನಿನಲ್ಲಿ ಕರೆದರೂ ಸಾಕು ಖರ್ಚಿನ ಮುಖ ನೋಡದೇ ಕ್ಯಾಬಿನಲ್ಲಿ ಹೋಗುವುದಿದೆ. ಚದುರಿ ಹೋದ ಹಳೆಯ ಸಂಬಂಧಗಳನ್ನು ನವೀಕರಿಸಿ ಬಾಯ್ತುಂಬಾ ಹರಟಿ ಮೊಬೈಲಿನ ಸಂಖ್ಯೆಗಳ ವಿನಿಮಯ ಮಾಡಿಕೊಂಡು ಹಿಂದಿರುಗುವಾಗ ಮನವೂ ಅರಳಿರುತ್ತದೆ. ಇದಂತೂ ತಮ್ಮ ಪೀಳಿಗೆಗೇ ಕೊನೆಯೇನೋ, ಸಂಬಂಧಗಳಲ್ಲಿ ಎಳ್ಳಷ್ಟೂ ನಂಬಿಕೆಯಿಲ್ಲದ ಇಂದಿನ ಯುವಪೀಳಿಗೆಗೆ ಸ್ನೇಹಸಂಬಂಧ, ಪಾರ್ಟಿಗಳಲ್ಲೇ ಹೆಚ್ಚು ವಿಶ್ವಾಸ. ಅದಕ್ಕೇ ಕರೆದರೂ ಜೊತೆಗೆ ಬರಲೊಲ್ಲರು– 'ಹೋಗಮ್ಮಾ ಅವರ್ಯಾರಂತಲೇ ಗೊತ್ತಿಲ್ಲ ನೀ ಬೇಕಾದ್ರೆ ಹೋಗು' ಎಂದು ತಾಯಿಗೆ ಬೇಸರವಾದದ್ದು ತಿಳಿದರೂ ಅಸಡ್ಡೆಯಿಂದ ಮುಖ ತಿರುವುತ್ತಿದ್ದರು. ಬಂದರೆ ತಾನೇ ಪರಿಚಯವಾಗುತ್ತದೆಂಬ ಲಲಿತೆಯ ವಾದ ವ್ಯರ್ಥವೆಂಬುದು ಕಟು, ಕಹಿಸತ್ಯವಾಗಿದ್ದರೂ ಒಪ್ಪಲೇಬೇಕಾದ ಅನಿವಾರ್ಯತೆ.



ಲಲಿತೆ ಗಂಡನೊಡನೆ ಕ್ಯಾಬಿನಲ್ಲಿ ಬಂದಾಗ ಪೂಜೆಯ ಕೊನೆಯ ಹಂತವಾಗಿ ವಿಶ್ವನಾಥ ಶರ್ಮರಿಂದ ಕಥಾಪಠಣ ನಡೆಯುತ್ತಿತ್ತು. ಅಲ್ಲಿ ಹಿಡಿಸುವಷ್ಟು ಹೆಂಗಳೆಯರು ಜಮಖಾನದ ಹಾಸಿನಲ್ಲಿ ಕುಳಿತಿದ್ದರೆ ಕೀಲು ನೋವಿನವರು, ಸ್ಥೂಲಕಾಯಿಗಳು ಕುರ್ಚಿಯಲ್ಲಿದ್ದರು. ಗಂಡಸರೆಲ್ಲಾ ಹೊರಗೆ ಹಜಾರದ ಸುಖಾಸೀನದಲ್ಲಿ ಮೈ ಚೆಲ್ಲಿದ್ದರೆ, ಕೆಲವರು ಎಲ್ಲೆಂದರಲ್ಲಿ ನಿಂತು ಮೆಲುದನಿಯಲ್ಲಿ ಹರಟುತ್ತಿದ್ದರು. ಅಲಂಕೃತಗೊಂಡ ಚೆಂದದ ಪೀಠದಲ್ಲಿ ವಿರಾಜಮಾನನಾದ ಶ್ರೀಮನ್ನಾರಾಯಣನಿಗೆ ದೂರದಿಂದಲೇ ನಮಿಸಿದ ಲಲಿತೆ ಗೋಡೆ ಬದಿಗೆ ಸರಿದು ನಿಲ್ಲುವಷ್ಟರಲ್ಲಿ ಯಾರೋ ಭುಜ ತಟ್ಟಿದಂತಾಗಿ ತಿರುಗಿದ್ದಳು, ನಗುತ್ತಾ ನಿಂತವಳು ಕಾಮಾಕ್ಷಿ!

'ಅರೇ ಕಾಮಾಕ್ಷೀ!' ಉದ್ಗರಿಸಿದ ಲಲಿತೆಯದ್ದು ಇದೇನಿಲ್ಲಿ, ಹೇಗೆ ಪರಿಚಯವೆಂಬ ಮುಖಭಾವ.

ಕಥಾಶ್ರವಣದಲ್ಲಿ ಮಗ್ನರಾದವರಿಗೆ ತೊಂದರೆಯಾದೀತೆಂದು ಇಬ್ಬರೂ ಹೆಂಗಸರಿಂದ ತುಂಬಿದ್ದ ಮತ್ತೊಂದು ಖೋಲಿಗೆ ತೆರಳಿ ಮೂಲೆಯ ಜಾಗ ಹಿಡಿದು ಹರಟತೊಡಗಿದರು.

ಸಮಾರಂಭವೊಂದರಲ್ಲಿ ಪರಿಚಯವಾದ ಕಾಮಾಕ್ಷಿಯೂ ಮೈಸೂರಿನವಳಾದ್ದರಿಂದ ತವರೂರಿನ ನಂಟಿನೊಂದಿಗೆ ಮೊದಲ ಭೇಟಿಯಲ್ಲೇ ಆಪ್ತಳಾಗಿದ್ದಳು. ಹಾಗೆಂದು ದಿನದಿನವೂ ಮೆಸೇಜು, ಹರಟೆಯಿಲ್ಲದಿದ್ದರೂ ಆತ್ಮೀಯತೆ ಬೆಳೆದಿತ್ತು, ಮತ್ತೀಗ ಅದೇ ಭಾವದಲ್ಲಿ ಹರಟತೊಡಗಿದ್ದರು.

'ಹಾಂ ಲಲಿತಾ! ಕೇಳೋಕೆ ಮರ್ತಿದ್ದೆ ನಿಮ್ಮ ಮನೆಗೆ ಒಬ್ರನ್ನ ಕಳಿಸಿದ್ದೆ. ಆಕೆ ಬಹಳ ಸ್ವಾಭಿಮಾನಿಯಾದ್ರೂ ಪರಿಸ್ಥಿತಿಯ ಒತ್ತಡಕ್ಕೆ ಕಟ್ಟುಬಿದ್ದು ಮಗನ ಅಡ್ಮಿಷನ್ನಿಗೆ ಸಹಾಯ ಬೇಡಿದ್ದಳು. ಎರಡು ದಿನದಲ್ಲಿ ಹಣ ಕಟ್ಟದಿದ್ದರೆ ಸೀಟು ಬೇರೆಯವರ ಪಾಲಾಗುತ್ತದೆ ಅಂತ ಪೇಚಾಡಿದ್ಲು. ಬಡ ವಿದ್ಯಾರ್ಥಿಗಳಿಗೆ ನೀವು ಖಂಡಿತಾ ಸಹಾಯ ಮಾಡುತ್ತೀರೆಂದು ಹೇಳಿ ಕೈಲಾದಷ್ಟು ಹಣ ಕೊಟ್ಟು ಕಳಿಸಿದ್ದೆ. ತಕ್ಷಣಕ್ಕೆ ನಿಮ್ಮ ಮೊಬೈಲಿಗೆ ಕರೆ ಮಾಡಿದ್ದೆ ಕೂಡ, ನಾಟ್‌ರೀಚಬಲ್ ಅಂತಾದದ್ದಕ್ಕೆ ನಂತರದಲ್ಲಿ ಹೇಳಿದರಾಯ್ತು ಅಂದುಕೊಂಡದ್ದು ಮರೆತೇಹೋಗಿತ್ತು. ನೀವೇನೋ ಸಹಾಯ ಮಾಡಿರ್ತೀರಾ, ಆದ್ರೆ ಅನ್ಯಾಯ ಆಗ್ಬಿಡ್ತು ರೀ.'

ಕಾಮಾಕ್ಷಿ ಮಾತಿನ್ನೂ ಮುಗಿದಿರಲಿಲ್ಲ, ಮರೆತಿದ್ದ ವಿಷಯ ತಾಜಾಗೊಂಡಿತು. ಹೌದಲ್ಲವೇ! ಅಪಾತ್ರರನ್ನೂ ಹೆಚ್ಚು ಪ್ರಶ್ನಿಸದವಳು ನಿಜಕ್ಕೂ ಅವಶ್ಯಕತೆಯಿದ್ದ ಆ ಹೆಂಗಸನ್ನು ಮಾತ್ರ ನಂಬಲಿಲ್ಲವೆಂದು ಹೇಳುವುದಾದರೂ ಹೇಗೆಂಬ ತೊಳಲಾಟದಲ್ಲಿದ್ದಾಗಲೇ ಕಾಮಾಕ್ಷಿಯ ಆ ಮಾತು ಕಾದ ಸೀಸದಂತೆ ಕಿವಿಗಪ್ಪಳಿಸಿತ್ತು. ತಾನು ಕೇಳಿಸಿಕೊಂಡದ್ದೇ ತಪ್ಪಿರಬಹುದು.

'ಗದ್ದಲದಲ್ಲಿ ಕೇಳಿಸ್ತಿಲ್ಲ ಇನ್ನೊಮ್ಮೆ ಹೇಳಿ' ಗಾಬರಿಯಲ್ಲಿ ಧ್ವನಿಯೇರಿತ್ತು.

'ಅದ್ಯಾಕೆ ಸೀಟು ಕೊಡಲಿಲ್ಲವೋ ಗೊತ್ತಿಲ್ಲ. ಆ ಹುಡುಗ ರೈಲಿಗೆ ತಲೆ ಕೊಟ್ನಂತೆ ಕಣ್ರೀ! ಅವ್ರ ಮನೆ ಅಡುಗೆ ಕೆಲ್ಸಾನೂ ಬಿಟ್ಬ್ಟಾಕೆ ಎಲ್ಲಿದ್ದಾಳೋ ತಿಳೀದು, ಅಂತಹ ಒಳ್ಳೆಯ ಹೆಂಗಸಿಗೆ ಹಾಗಾಗ್ಬಾರ್ದಿತ್ತು ಅಂತ ಜೋಶೀಮಾಮಿ ಅಲವತ್ತುಕೊಳ್ತಿದ್ರು' ಕಿವಿಯೆಡೆಗೆ ಬಾಗಿ ಹೇಳಿದಳು.

ಅಯ್ಯೋ ದೇವರೇ! ಹಣದ ಅಡಚಣೆಯೇ ಸೀಟು ಸಿಗದಿದ್ದಕ್ಕೆ ಕಾರಣವಾಗಿರಬಹುದೇ? ಸಕಾಲದಲ್ಲಿ ಆಕೆಗೆ ಧನಸಹಾಯ ಮಾಡಿದ್ದಲ್ಲಿ ಅವ ಬದುಕುತ್ತಿದ್ದನೇನೋ ಮೈ ಹಿಡಿಯಾಗಿಸಿಕೊಂಡು ಬೇಡಿಕೊಂಡವಳನ್ನು ನಂಬದೇ ನಿರ್ದಯಿಯಾಗಿ ಬರಿಗೈಯಲ್ಲಿ ಕಳಿಸಿದ್ದನ್ನು, ನಂಬಿಕೆಯಿಟ್ಟು ಕಳಿಸಿದ ಕಾಮಾಕ್ಷಿಯಲ್ಲಿ ಹೇಗೆ ಹೇಳಲಿ ಎಲ್ಲವ್ವಳಿಗಾದ ಅನ್ಯಾಯಕ್ಕೆ ಪ್ರತ್ಯಕ್ಷವೋ, ಪರೋಕ್ಷವೋ ತಾನೂ ಜವಾಬ್ದಾರಳಾದೆನೇ.

'ಢಣ್ ಢಣ್ ಢಣ್! ಜಾಗಟೆಯ ಸದ್ದಿಗೆ ಮೇಲೆದ್ದ ಎಲ್ಲರೂ ಭಕ್ತಿಭಾವದಲ್ಲಿ ಕೈಜೋಡಿಸಿದ್ದರು, ಇವಳೂ ಹೆಂಗಸರ ಮಂದೆಯಲ್ಲಿ ದರ್ಶನ, ಪ್ರಸಾದಕ್ಕೆಂದು ಸಾಗಿದ್ದಳು.

ದೇವರ ಮುಂದೆ ಆರ್ತಳಾಗಿ ಕೈಮುಗಿದು ನಿಂತವಳನ್ನು ಕಾಡಿದ್ದು ಪಾಪಪ್ರಜ್ಞೆಯೋ, ಪಶ್ಚಾತ್ತಾಪವೋ ತಿಳಿಯದಾಗಿತ್ತು.

ಪ್ರತಿಕ್ರಿಯಿಸಿ: **feedback@sudha.co.in**